ಶ್ರೀ ಡಿ. ಎಂ. ಗೋವಿಂದರಾಜು ಅವರು.—ಸರ್ವೆ ಮರದ ಸೌದೆಗೆ ಕಂಟ್ರೋಲ್ ಇಡಲು ಕಾರಣ ವೇನು ?

ಶ್ರೀ ಎಚ್. ಸಿದ್ದವೀರಪ್ಪನವರು.—ಸೌದೆಗೆ ಏನೂ ಅಭಾವವಿಲ್ಲವೆಂದು ಈ ಹತೋಟಿಯನ್ನು ಸಡಿಲ ಮಾಡುವವರೆಗೆ ಇದರ ಮೇಲಿನ ಹತೋಟಿ ಆಜ್ಞೆಯನ್ನು ತೆಗೆಯಲು ಅವಕಾಶವಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಸರ್ವೆ ಮರಗಳನ್ನು 6 ವರ್ಷದವರೆಗೂ ಕಡಿಯಕೂಡ ದೆಂದು ಸರ್ಕಾರದ ಆಜ್ಞೆ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದು ಪೂರ್ತಿ ಬಲಿಯಬೇಕಾಗಿದ್ದರೆ 8–10 ವರ್ಷ ಕಾಲ ಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿಯವರು (ಬೆಂಗಳೂರು ದಕ್ಷಿಣ).—ಈಗ ಸರ್ವೆ ಮರಗಳನ್ನು 6 ವರ್ಷಕ್ಕೆ ಮುಂಚೆ ಕಡಿಯಕೂಡದೆಂದು ಆಜ್ಞೆ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಇದನ್ನು ಹತ್ತು ವರ್ಷಗಳಿಗೆ ಏರಿಸುವ ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಪೂರ್ತಿ ಬಲಿಯುವ ತನಕ ಕಡಿಯಬಾರದೆಂಬುದನ್ನು ಆಲೋಚನೆ ಮಾಡಲಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈ ಸರ್ವೆ ಸೌದೆ ಎಲ್ಲಿಗೆ ಸರಬರಾಯಿ ಆಗುತ್ತಿದೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಗರ ಪ್ರದೇಶ ಗಳಿಗೆ. I may also submit at this moment that the Government intend constituting a Committee to solve the fuel problem, particularly in Urban areas.

Audit of Accounts of Central Food Reserve Depot.

Q.—463. **Sri Y. M. CHANDRASEKHARIAH** (Kadur).—

Will the Government be pleased to state :—

(*a*) whether the accounts of Central Food Reserve Depot at Kadur in Chikmagalur District have been audited ;

(*b*) whether it has come to their notice that the cash of the said Depot has been misappropriated ;

(*c*) the action taken in respect of the said offence ?

A.—**Sri H. SIDDAVEERAPPA** (Minister for Home Affairs and Agriculture).—

(*a*) The accounts have been audited every year and they have been audited up to end of June 1951.

(*b*) No such instance has been reported till today.

(*c*) Does not arise.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರಿನಲ್ಲಿ ಒಂದು ಆಹಾರದ ರಿಜರ್ವ್ ಡಿಪೋ ಇರುವುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಗೊತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಆ ಡಿಪೋವಿನ ಲೆಕ್ಕ ಪತ್ರಗಳು ಆಡಿಟ್ ಆಗದಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಲೆಕ್ಕ ಪತ್ರ ಗಳನ್ನೆಲ್ಲಾ ಆಡಿಟ್ ಮಾಡಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಹಾಗೆ ಆಡಿಟ್ ಮಾಡಲಾದ ಲೆಕ್ಕ ಪತ್ರಗಳಿಂದ ಹಣ ದುರುಪ ಯೋಗವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಜೂನ್ 1951ರ ತನಕ ಆಡಿಟ್ ಆಗಿರುವ ಲೆಕ್ಕ ಪತ್ರಗಳಲ್ಲಿ ಸರ್ಕಾರದ ವರಿಗೆ ಯಾವ ನ್ಯೂನತೆಗಳೂ ಕಂಡುಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1951ನೆಯ ಇಸವಿ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿ ಸಿದ್ದರಲ್ಲಿ ಹಣ ಖೋತಾ ಬಂದಿರುತ್ತದೆಯೆಂದು ಸರ್ಕಾರಕ್ಕೆ ವರದಿ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪನವರು.—'ವರದಿ ಬಂದಿಲ್ಲ' ಎಂದು ಉತ್ತರದಲ್ಲೇ ತಿಳಿಸಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1951ನೆಯ ಇಸವಿ ಲೆಕ್ಕ ಪತ್ರಗಳಲ್ಲಿ ವ್ಯತ್ಯಾಸಗಳಿರುವುದರಿಂದ ಅವುಗಳನ್ನು ಪುನಃ ಪರಿಶೀಲನೆಗೆ ಆಜ್ಞೆ ಮಾಡಲಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಂಥ ಅಗತ್ಯ ಕಂಡು ಬಂದರೆ ಖಂಡಿತ ಮಾಡಲಾಗುತ್ತದೆ.

Mr. SPEAKER.—Question hour is over.

1 P. M.

QUESTIONS FOR ANSWERS ON THE DAY

(Not taken up)

Restoration of Tanks in Bangalore District.

Q.—173. **Sri K. V. BYRE GOWDA** (Bangalore North).—

Will the Government be pleased to state :—

(*a*) the number of major and minor tanks in Bangalore District (talukwar information may kindly be furnished);

(*b*) the number of tanks taken up for restoration (talukwar information may kindly be furnished) ;

(*c*) the number of tanks asked for restoration (talukwar information may kindly be furnished) ;

(*d*) the reason for the delay ?